# ಬಾಲ್ಯದ ಬೆಳವಣಿಗೆಯ ಸಾಮಾನ್ಯ ವಿಳಂಬಗಳಿಗೆ ಅಪಾಯದ ಮುನ್ಸೂಚಕಗಳು

(ಮರುಸಂಪಾದಿಸಲಾಗಿದೆ: ರೆಡ್ ಫ್ಲ್ಯಾಗ್ಸ್ ಫಾರ್ ಕಾಮನ್ ಚೈಲ್ಡ್‌ಹುಡ್ ಡೆವಲಪ್‌ಮೆಂಟಲ್ ಡಿಲೇಸ್ - ಬ್ಲಾಸಮ್ ಚಿಲ್ಡ್ರನ್ಸ್ ಸೆಂಟರ್ (blossomchildrenscenter.com)

ಮಕ್ಕಳಲ್ಲಿ, ಸದಾಕಾಲವೂ ಕಲಿಕೆ ಮತ್ತು ಬೆಳವಣಿಗೆಯು ಕಂಡುಬರುವ ಕಾರಣ, ಮಗುವಿನ ಜನನದ ನಂತರದ ಪ್ರತಿ ಕ್ಷಣವೂ ಮಹತ್ವದ ಸಮಯವಾಗಿರುತ್ತದೆ. ಮಕ್ಕಳು ನಿರಂತರವಾಗಿ ತಮ್ಮ ಸುತ್ತಮುತ್ತಲಿನ ಪರಿಸರದಿಂದ ಹಲವಾರು ಅಂಶಗಳನ್ನು ಗ್ರಹಿಸುತ್ತಾ ತಮ್ಮ ಪಾರಸ್ಪರಿಕ ಕ್ರಿಯೆಗಳಿಂದ ಕಲಿಯುತ್ತಿರುವಾಗ, ತಮ್ಮ ನಿರ್ದಿಷ್ಟ ವಯಸ್ಸಿಗೆ ಅನುಗುಣವಾಗಿ ತಲುಪಬೇಕಾದ ಹಲವಾರು ಮಹತ್ವಪೂರ್ಣ ಘಟ್ಟಗಳಿರುತ್ತವೆ. ನಿಮ್ಮ ಮಗು ಬೆಳವಣಿಗೆಯಲ್ಲಿ ಹಿಂದಿದ್ದು, ಸರಿಯಾದ ಪ್ರಮಾಣದಲ್ಲಿ ಬೆಳವಣಿಗೆಯಾಗುತ್ತಿಲ್ಲ ಎಂದು ನೀವು ಚಿಂತಿಸುತ್ತಿದ್ದರೆ, ಇದು ನಿಮ್ಮ ಮಗು ಬೆಳವಣಿಗೆಯ ವಿಳಂಬವನ್ನು ಅನುಭವಿಸುತ್ತಿದೆ ಎಂಬುದರ ಸಂಕೇತವಾಗಿರಬಹುದು

ಭಾವನಾತ್ಮಕ ಪ್ರತಿಕ್ರಿಯೆಗಳು ಅಥವಾ ಬಾಲ್ಯಾವಸ್ಥೆಯ ಮಾತುಗಳಂತಹ ನಿಮ್ಮ ಮಕ್ಕಳ ಪಾರಸ್ಪರಿಕ ಕ್ರಿಯೆಗಳಲ್ಲಿನ ಮಹತ್ವಪೂರ್ಣ ಅಂಶಗಳನ್ನು ನಿಕಟವಾಗಿ ಗಮನಿಸುವುದರಿಂದ ಅದು, ಅಗತ್ಯವಿದ್ದಾಗ, ಆರಂಭದಲ್ಲಿಯೇ ವಾಕ್-ಚಿಕಿತ್ಸೆ, ಆನ್ವಯಿತ ವರ್ತನಾ ವಿಶ್ಲೇಷಣೆ (ABA) ಚಿಕಿತ್ಸೆಯನ್ನು ಅರಸುವುದನ್ನು ನಿಮಗೆ ಸಾಧ್ಯವಾಗಿಸುತ್ತದೆ.

ಕೆಳಗೆ ನೀಡಲಾದ ಬಾಲ್ಯದ ಬೆಳವಣಿಗೆಯ ನಾಲ್ಕು ಮುಖ್ಯ ಗುಂಪುಗಳನ್ನು ನಾವು ಆಳವಾಗಿ ಪರಿಶೀಲಿಸೋಣ:

- ಮಾತು ಮತ್ತು ಭಾಷೆಯಲ್ಲಿ ವಿಳಂಬ
- ಚಲನಾ ಕೌಶಲ್ಯಗಳು
- ಸಾಮಾಜಿಕ ಬೆಳವಣಿಗೆ
- ಸಂಜ್ಞಾನಾತ್ಮಕ ಕೌಶಲ್ಯಗಳು

ಮಾರ್ಗದರ್ಶಿಯು ಬಾಲ್ಯದ ವಿವಿಧ ಬೆಳವಣಿಗೆಯ *ವರ್ಗಗಳು* ಏಕೆ ಅಗತ್ಯವಾಗಿವೆ ಮತ್ತು ಬೆಳವಣಿಗೆಯ ವಿಳಂಬದ ಆರಂಭಿಕ ಲಕ್ಷಣಗಳನ್ನು ನೀವು ಹೇಗೆ ಗುರುತಿಸಬಹುದು ಎಂಬುದರ ಕುರಿತಾದ ಸಮಗ್ರ ವಿವರವನ್ನು ಒದಗಿಸುತ್ತದೆ. ಬಾಲ್ಯದಲ್ಲಿ ಮಾತು ವಿಳಂಬವಾಗುವುದು ಅಥವಾ ಈ ಇತರೆ ಬೆಳವಣಿಗೆಗಳು ನಿಮ್ಮ ಮಗುವಿನಲ್ಲಿ ಕಂಡುಬಂದರೆ, ನೀವು ವಾಕ್ ಚಿಕಿತ್ಸೆ ನೀಡುವವರ ಸಲಹೆಯನ್ನು ಯಾವಾಗ ಪಡೆಯಬೇಕು ಎಂಬುದರ ಕುರಿತು ನಾವು ನಿಮಗೆ ಮಾರ್ಗದರ್ಶನ ನೀಡುತ್ತೇವೆ. ಬಾಲ್ಯದ ಬೆಳವಣಿಗೆಯ ವಿಳಂಬಗಳು ಸೌಮ್ಯವಾಗಿ ಕಾಣಿಸಬಹುದು, ಆದರೆ ಯಾವುದೇ ರೀತಿಯ ಅಡೆತಡೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಲು ಬೆಳವಣಿಗೆಯ ಪ್ರಮುಖ ಘಟ್ಟಗಳ ಬಗ್ಗೆ ಎಚ್ಚರದಿಂದಿರುವುದು ಮತ್ತು ಆ ಬಗ್ಗೆ ತಿಳಿದಿರುವುದು ಅತ್ಯಗತ್ಯ.

## ಬಾಲ್ಯದ ಮಾತು ಮತ್ತು ಭಾಷಾ ವಿಳಂಬಗಳು ಯಾವುವು?

ಜೀವನದ ಇತರ ಅಂಶಗಳೊಡನೆ ಪಾರಸ್ಪರಿಕ ಕ್ರಿಯೆಯ ನಿಟ್ಟಿನ ಮಾತು ಮತ್ತು ಭಾಷೆ ಮಗುವಿನ ವಿಕಾಸ ಮತ್ತು ಬೆಳವಣಿಗೆಯ ಒಂದು ನಿರ್ಣಾಯಕ ಭಾಗವಾಗಿದೆ. ಬಾಲ್ಯದ ಮಾತು ಮತ್ತು ಭಾಷಾ ವಿಳಂಬಗಳ ಉಪಸ್ಥಿತಿಯು ಬೆಳವಣಿಗೆಯ ಅಸ್ವಸ್ಥತೆಗಳು ಅಥವಾ ಶ್ರವಣ ದೌರ್ಬಲ್ಯವು ಸೇರಿದಂತೆ ಹಲವಾರು ಕಾರಣಗಳಿಂದ ಉಂಟಾಗಬಹುದು. ಶ್ರವಣ ಸಮಸ್ಯೆಗಳನ್ನು ಬಾಲ್ಯದ ಮಾತು ಮತ್ತು ಭಾಷಾ ವಿಳಂಬಗಳಿಂದ ಪ್ರತ್ಯೇಕಿಸಲು ಮತ್ತು ಗುರುತಿಸಲು ವಾಕ್ ಚಿಕಿತ್ಸೆ ಸಹಾಯ ಮಾಡಬಲ್ಲದು. ಭಾಷಾ ವಿಳಂಬಗಳು ಮಗುವಿನ ಸಾಮಾಜಿಕ ಪಾರಸ್ಪರಿಕ

ಕ್ರಿಯೆಗಳಿಗೆ ಅಡ್ಡಿಯಾಗಬಹುದು, ಅನಪೇಕ್ಷಿತ ವರ್ತನೆ ಮತ್ತು ಕೆಳಮಟ್ಟದ ಶೈಕ್ಷಣಿಕ ಕೌಶಲ್ಯಗಳಿಗೆ ಕಾರಣವಾಗಬಹುದು.

**ಬಾಲ್ಯದ ಮಾತು ಮತ್ತು ಭಾಷೆಯ ವಿಳಂಬಗಳು ಮತ್ತು ಅಸ್ವಸ್ಥತೆಗಳ ಕೆಲವು ಸಾಮಾನ್ಯ ಪ್ರಕಾರಗಳನ್ನು ಕೆಳಗೆ ನೀಡಲಾಗಿದೆ:**

- ಬಾಲ್ಯದ ವಾಕ್-ಶಬ್ದ ಚಲನ ಅಸ್ವಸ್ಥತೆ (Childhood apraxia of speech) – ಮಾತಿನಚಲನೆಗಳನ್ನು ಅನುಕ್ರಮವಾಗಿ ನಡೆಸಲು ಸಾಧ್ಯವಾಗದ ಅಸಮರ್ಥತೆ ಅಥವಾ ತೊಂದರೆಗೆ ಸಂಬಂಧಿಸಿದ ಬಾಲ್ಯಾವಸ್ಥೆಯ ಮಾತಿನ ಅಸ್ವಸ್ಥತೆ.
- ಅಭಿವ್ಯಕ್ತಿಯ ಭಾಷಾ ವಿಳಂಬಗಳು (Expressive language delays) - ಸಂವಹನಕ್ಕಾಗಿ ಪದಗಳನ್ನು ಬಳಸುವಲ್ಲಿನ ತೊಂದರೆ.
- ತಡವಾಗಿ ಮಾತನಾಡುವವರು (Late talkers) - –ಸಮವಯಸ್ಕರಿಗೆ ಹೋಲಿಸಿದಾಗ ಆಡುಮಾತಿನ ಸೀಮಿತ ಪದಸಂಪತ್ತುಳ್ಳವರು.
- ಕಲಿಕೆಯಲ್ಲಿನ ಅಸಮರ್ಥತೆಗಳು (Learning disabilities) - ಓದುವುದು, ಬರೆಯುವುದು ಮತ್ತು ಕಾಗುಣಿತದಲ್ಲಿನ ತೊಂದರೆ.
- ದೋಷಯುತ ಉಚ್ಚಾರ (Dysarthria) ಧ್ವನಿ ಸ್ನಾಯುಗಳು ದುರ್ಬಲಗೊಂಡದ್ದರಿಂದ ಉಂಟಾಗುವ ವಾಕ್-ಚಾಲನಾ ಅಸ್ವಸ್ಥತೆ.

**ಭಾಷೆಯ ವಿಳಂಬದ ಆರಂಭಿಕ ಲಕ್ಷಣಗಳನ್ನು ಗುರುತಿಸುವುದು**

ಬಾಲ್ಯದ ಮಾತು ಮತ್ತು ಭಾಷಾ ವಿಳಂಬಗಳು ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳಬಹುದು. ಅದನ್ನು ಶ್ರದ್ಧೆಯಿಂದ ಗಮನಿಸುವ ಮತ್ತು ಸಕ್ರಿಯ ಆರೈಕೆದಾರರಾಗುವ ಮೂಲಕ, ನೀವು ಯಾವುದೇ ಸಮಸ್ಯೆಗಳ ಆರಂಭಿಕ ಸೂಚನೆಗಳನ್ನು ಗುರುತಿಸಬಹುದು. ನಾವು ಸಾಮಾನ್ಯವಾಗಿ ಮಕ್ಕಳೊಂದಿಗೆ ಸಂವಹನ ನಡೆಸುವಾಗ ಒಳ್ಳೆಯ ಉದ್ದೇಶದಿಂದ ಉತ್ಪ್ರೇಕ್ಷಿತ ಅಭಿವ್ಯಕ್ತಿಗಳಲ್ಲಿ ಮಾತನಾಡುತ್ತೇವೆ. ಮಕ್ಕಳು ಯಾವಾಗಲೂ ತಮ್ಮ ಸುತ್ತಲಿನ ಪರಿಸರದಿಂದ ಕಲಿಯುತ್ತಿರುತ್ತಾರೆ ಮತ್ತು ಗ್ರಹಿಸುತ್ತಿರುತ್ತಾರೆ. ಈ ಉತ್ಪ್ರೇಕ್ಷಿತ ಅಭಿವ್ಯಕ್ತಿಗಳು ಮಕ್ಕಳಿಗೆ ಅನುಕರಣೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತವೆಯಲ್ಲದೆ, ಇದು, ಬಾಲ್ಯದ ಮಾತು ಮತ್ತು ಭಾಷೆಯ ಬೆಳವಣಿಗೆಯಲ್ಲಿ ಮಹತ್ವದ ಅಂಶವಾಗಿದೆ. ನೀವು ಮಗುವಿನ ಎರಡು ತಿಂಗಳ ವಯಸ್ಸಿನಲ್ಲಿಯೇ ಮತ್ತು ಪ್ರಾಯಶಃ ಅದಕ್ಕೂ ಮುಂಚೆಯೇ ಭಾಷೆಯ ವಿಳಂಬದ ಲಕ್ಷಣಗಳನ್ನು ಗುರುತಿಸಬಹುದು.

ಅನುಕರಣೆಯ ಕೊರತೆ, ಕಣ್ಣಿನ ಸಂಪರ್ಕದ ಕೊರತೆ ಅಥವಾ ಪ್ರತಿಕ್ರಿಯಿಸದಿರುವಿಕೆಯಿಂದ ನೀವು ಮಗುವಿನಲ್ಲಿ ಭಾಷೆಯ ವಿಳಂಬದ ಲಕ್ಷಣಗಳನ್ನು ಗುರುತಿಸಬಹುದು, ಅಥವಾ ಪ್ರತಿಕ್ರಿಯಿಸದಿರುವುದು ಶ್ರವಣ ಸಮಸ್ಯೆಗಳ ಸಂಕೇತವೂ ಆಗಿರಬಹುದು. ಈ ಸಂವಹನ ಮಾರ್ಗಗಳನ್ನು ಶೈಶವಾವಸ್ಥೆಯಲ್ಲಿಯೇ ಗಮನಿಸಬಹುದು. ಶಿಶು ಮಾತನಾಡುವ ಆರಂಭಿಕ ಲಕ್ಷಣಗಳು ಮೊದಲು ಬಾಯಿಂದ ಸ್ವರವನ್ನು ಹೊರಡಿಸುವ ಮತ್ತು ತೊದಲು ಮಾತಿನ ರೂಪದಲ್ಲಿರುತ್ತವೆ. ಒಂದು ವೇಳೆ ನಿಮ್ಮ ಮಗು ತೊದಲು ಮಾತುಗಳನ್ನು ಆರಂಭಿಸದಿದ್ದರೆ, ಅರ್ಥಸೂಚಕ

ಚಲನೆಗಳನ್ನು ಮಾಡದಿದ್ದರೆ ಅಥವಾ ಆಟದ ಸಮಯದಲ್ಲಿ ಕಣ್ಣಿನ ಸಂಪರ್ಕದ ಮೂಲಕ ನಿಮ್ಮೊಂದಿಗೆ ತೊಡಗಿಸಿಕೊಳ್ಳದಿದ್ದರೆ, ಇದು ಮಾತು ಅಥವಾ ಭಾಷೆಯ ವಿಳಂಬದ ಸಂಕೇತವಾಗಿರಬಹುದು.

**ತಡವಾಗಿ ಮಾತನಾಡುವವರು**

18-30 ತಿಂಗಳ ವಯಸ್ಸಿನ ಅಂಬೆಗಾಲಿಡುವ ಮಕ್ಕಳು ಸಣ್ಣ, ಸಂಕ್ಷಿಪ್ತ ವಾಕ್ಯಗಳಲ್ಲಿ ಮಾತನಾಡಲು ಪ್ರಾರಂಭಿಸುತ್ತಾರೆ - ಇದು ಅಸಹಜವಲ್ಲ ಮತ್ತು ತಡವಾಗಿ ಮಾತನಾಡುವವರ ಲಕ್ಷಣವೂ ಅಲ್ಲ. ತಡವಾಗಿ ಮಾತನಾಡುವವರ ಭಾಷೆಯ ವಿಳಂಬವು 30 ತಿಂಗಳು ಕಳೆದ ನಂತರದ ಬಾಲ್ಯದ ಸೀಮಿತ ಮಾತುಗಳಿಂದ ವ್ಯಾಖ್ಯಾನಿಸಲ್ಪಡುತ್ತದೆ. ನಿಮ್ಮ ಮಗು ಮಾತನಾಡಲು ಮತ್ತು ವಾಕ್ಯಗಳನ್ನು ರೂಪಿಸಲು ಪ್ರಯತ್ನಿಸಿದ ಅದರ ಯಾವುದೇ ವಯಸ್ಸಿನಲ್ಲಿ ತಡವಾಗಿ ಮಾತನಾಡುವವರ ಮಾತಿನ ವಿಳಂಬದ ಲಕ್ಷಣಗಳನ್ನು ನೀವು ವೀಕ್ಷಿಸಲು ಪ್ರಾರಂಭಿಸಬಹುದು. ಮಕ್ಕಳು ಕೆಲವೊಮ್ಮೆ ತಮ್ಮ ಪದಗಳನ್ನು ಅಥವಾ ಪದಗಳ ಅರ್ಥಗಳನ್ನು ಗೊಂದಲಗೊಳಿಸುವುದು ಸಾಮಾನ್ಯವಾದರೂ, ಈ ಸಮಸ್ಯೆಯ ಸ್ಥಿರ ಉಪಸ್ಥಿತಿಯು ತಡವಾಗಿ ಮಾತನಾಡುವವರ ಲಕ್ಷಣವಾಗಿರಬಹುದು. ಇವರು ಪದಗಳ ಗಲಿಬಿಲಿ ಅಥವಾ ಗೊಂದಲವನ್ನು ಅನುಭವಿಸುತ್ತಾರೆ. ತಡವಾಗಿ ಮಾತನಾಡುವವರ ಸಮಸ್ಯೆಯನ್ನು ಪರಿಹರಿಸದಿದ್ದರೆ, ಈ ಗೊಂದಲವು ಶಾಲಾಪೂರ್ವ ವಯಸ್ಸಿನವರೆಗೆ ಮುಂದುವರಿಯಬಹುದು ಮತ್ತು ಮಗುವಿನ ಶೈಕ್ಷಣಿಕ, ಸಾಮಾಜಿಕ ಪಾರಸ್ಪರಿಕ ಕ್ರಿಯೆ ಮತ್ತು ಒಟ್ಟಾರೆ ಆತ್ಮವಿಶ್ವಾಸದಿಂದ ಮಾತನಾಡುವುದರ ಮೇಲೆ ಇದು ದೀರ್ಘಕಾಲೀನ ಪರಿಣಾಮವನ್ನು ಬೀರುತ್ತದೆ.

ಬಾಲ್ಯದ ಮಾತಿನ ಸಮಸ್ಯೆಗಳು ಈ ಕೆಳಗಿನ ಸಮಸ್ಯಾತ್ಮಕ ಅಂಶಗಳ ಆಧಾರದ ಮೇಲೆ ತಡವಾಗಿ ಮಾತನಾಡುವ ಮಗುವಿನಲ್ಲಿ ಪ್ರಕಟವಾಗಬಹುದು: ಗ್ರಹಿಕೆಯ ಸಮಸ್ಯೆಗಳು, ಅರ್ಥಸೂಚಕ ಚಲನೆಯ ಸೀಮಿತ ಬಳಕೆ ಮತ್ತು ಕುಟುಂಬದ ಇತಿಹಾಸ. ಈ ಯಾವುದೇ ಲಕ್ಷಣಗಳು ನಿಮ್ಮ ಗಮನಕ್ಕೆ ಬಂದರೆ ವಾಕ್ ಚಿಕಿತ್ಸೆ ಪಡೆಯಲು ಇದು ಸರಿಯಾದ ಸಮಯ. ಬಾಲ್ಯದ ಮಾತು ಮತ್ತು ಭಾಷಾ ವಿಳಂಬಗಳು ಚಿಕಿತ್ಸೆ ನೀಡದೆ ಬಿಟ್ಟರೆ ಗಮನಾರ್ಹ ಸಮಸ್ಯೆಗಳನ್ನು ಉಂಟುಮಾಡಬಹುದು ಆದ್ದರಿಂದ ವಾಕ್ ಚಿಕಿತ್ಸೆ ರೂಪದಲ್ಲಿ ಆರಂಭಿಕ ಹಸ್ತಕ್ಷೇಪವು ಮಹತ್ವಪೂರ್ಣವಾದುದು. ತಡವಾಗಿ ಮಾತನಾಡುವವರ ಭಾಷಾ ವಿಳಂಬವನ್ನು ಸಾಮಾಜಿಕ ಪಾರಸ್ಪರಿಕ ಕ್ರಿಯೆ ಮತ್ತು ಹೊರಗಿನ ಸಮಾಜಕ್ಕೆ ತೆರೆದುಕೊಳ್ಳುವ ಮೂಲಕ ಸರಿಪಡಿಸಬಹುದು ಅಥವಾ ಸರಿಪಡಿಸದೆಯೂ ಇರಬಹುದು, ಆದ್ದರಿಂದ ತಡವಾಗಿ ಮಾತನಾಡುವ ಮೊದಲ ಲಕ್ಷಣವು ಕಂಡಾಗಲೇ ವಾಕ್ ಚಿಕಿತ್ಸೆಯನ್ನು ಹುಡುಕಿಕೊಳ್ಳುವುದು ಉತ್ತಮ.

**ವಿಳಂಬಿತ ಚಲನಾ ಕೌಶಲ್ಯಗಳು ಯಾವುವು**

ಬಾಲ್ಯದ ಬೆಳವಣಿಗೆಗೆಯನ್ನು ಕುರಿತು ನಾವು ಎರಡು ವರ್ಗದ ಚಲನಾ ಕೌಶಲ್ಯಗಳನ್ನು ನೋಡುತ್ತೇವೆ: ಸ್ಥೂಲ ಚಲನಾ ಕೌಶಲ್ಯಗಳು ಮತ್ತು ಸೂಕ್ಷ್ಮ ಚಲನಾ ಕೌಶಲ್ಯಗಳು. ಸ್ಥೂಲ ಚಲನಾ ಕೌಶಲ್ಯಗಳು ಚಲಿಸಲು ಮುಖ್ಯವಾಗಿರುವ, ಹೆಚ್ಚು ಸಾಂದ್ರವಾದ ಸ್ನಾಯು ಗುಂಪುಗಳ ಬಳಕೆಯನ್ನು ಒಳಗೊಂಡಿರುತ್ತದೆ. ಸ್ಥೂಲ ಚಲನಾ ಕೌಶಲ್ಯಗಳ ಕೆಲವು ಉದಾಹರಣೆಗಳು ಕುಳಿತುಕೊಳ್ಳುವುದು, ನಡೆಯುವುದು ಮತ್ತು ಸಮತೋಲನವನ್ನು ಒಳಗೊಂಡಿರುತ್ತವೆ. ಸೂಕ್ಷ್ಮ

ಚಲನಾ ಕೌಶಲ್ಯಗಳು ತಿನ್ನುವುದು, ಬರೆಯುವುದು ಮತ್ತು ಆಡುವಂತಹ ಸಂಕೀರ್ಣ ಕಾರ್ಯಗಳಿಗೆ ಅಗತ್ಯವಿರುವ ಹೆಚ್ಚು ಧೃಢ ಕೌಶಲ್ಯಗಳ ಗುಂಪನ್ನು ಒಳಗೊಂಡಿರುತ್ತವೆ.

ಮಕ್ಕಳು ಆರಂಭಿಕ ಶೈಶವಾವಸ್ಥೆಯಲ್ಲಿ ಸ್ಥೂಲ ಚಲನಾ ಕೌಶಲ್ಯಗಳನ್ನು ಪಡೆಯುವತ್ತ ಕಾರ್ಯಪ್ರವೃತ್ತರಾಗಿ ನಂತರ ಅವರ ಆರಂಭಿಕ ಬಾಲ್ಯಾವಸ್ಥೆಯಲ್ಲಿ ಹೆಚ್ಚು ಸುಧಾರಿತ ಚಲನಾ ಕೌಶಲ್ಯಗಳೆಡೆಗೆ ಮುನ್ನಡೆಯುತ್ತಾರೆ. ಸ್ಥೂಲ ಚಲನಾ ಕೌಶಲ್ಯಗಳು ಹೆಚ್ಚು ಸುಧಾರಿತ ಉತ್ತಮ ಚಲನಾ ಕೌಶಲ್ಯಗಳ ಆಧಾರವೆಂಬಂತೆ ಕಾರ್ಯನಿರ್ವಹಿಸಿ, ಮಗುವಿನ ವಿಕಾಸದ ಪ್ರಮುಖ ಭಾಗವೆನಿಸಿವೆ.

**ವಿಳಂಬಿತ ಚಲನಾ ಕೌಶಲ್ಯಗಳು ಕೆಲವು ವಿಭಿನ್ನ ರೀತಿಯಲ್ಲಿ ಹೊರಹೊಮ್ಮಬಹುದು:**

- ವಿಳಂಬಿತ ಪಕ್ವತೆ
- ಅಸಮತೋಲನ
- ಅಸಮನ್ವಯತೆ/ಸಮನ್ವಯತೆ ಇಲ್ಲದಿರುವಿಕೆ

ವಿಳಂಬಿತ ಪಕ್ವತೆಯು ಸ್ಥೂಲ ಚಲನಾ ಕೌಶಲ್ಯಗಳನ್ನು ಅವುಗಳ ನಿರ್ದಿಷ್ಟ ಮಹತ್ವಪೂರ್ಣ ಘಟ್ಟಗಳ ಸೂಕ್ತ ವ್ಯಾಪ್ತಿಯಲ್ಲಿ ಬಳಸುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಅಸಮತೋಲನವು ಮಗುವಿನ ಸಮತೋಲನದ ಅಸಾಮರ್ಥ್ಯವನ್ನು ಸೂಚಿಸುತ್ತದೆ. ನಿಲ್ಲುವುದರಲ್ಲಿ ಮತ್ತು ಕೂರುವುದರಲ್ಲಿ - ಈ ಎರಡರಲ್ಲೂ ಇದು ಪ್ರಕಟಗೊಳ್ಳಬಹುದು. ಮಗುವಿಗೆ ನೇರವಾಗಿ ಕುಳಿತುಕೊಳ್ಳಲು, ನಿಲ್ಲಲು, ನಡೆಯಲು, ಇನ್ನೂ ಮುಂತಾದುವುಗಳಿಗೆ ಸಮತೋಲನವು ಅಗತ್ಯ ಸಮನ್ವಯನವಿಲ್ಲದ ಮಗು ತನ್ನ ದೇಹದ ಎಲ್ಲಾ ಭಾಗಗಳನ್ನು ಉತ್ತಮವಾಗಿ ಚಲಿಸಲು ಸಾಧ್ಯವಾಗುವುದಿಲ್ಲ. ಹೆಚ್ಚಿನ ಮಕ್ಕಳು, ನಡೆಯಲು ಕಲಿಯುವಾಗ, ಸಮತೋಲನವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ, ಸ್ವಲ್ಪ ಒಡ್ಡೊಡ್ಡಾಗಿ, ಕ್ರಮರಹಿತವಾಗಿರುವಂತೆ ಕಂಡುಬರುತ್ತಾರೆ. ಸಮನ್ವಯನದ ಕೊರತೆಯು ಸ್ಥೂಲ ಚಲನಾ ಕೌಶಲ್ಯಗಳ ಕಳಪೆ ಕಾರ್ಯಕ್ಷಮತೆಯಲ್ಲಿ ಪ್ರಕಟಗೊಳ್ಳುತ್ತದೆ.

**ನಿಮ್ಮ ಮಗುವಿನ ಚಲನಾ ಕೌಶಲ್ಯಗಳನ್ನು ಸುಧಾರಿಸುವುದು ಹೇಗೆ**

ಆಟದ ಸಮಯ, ಊಟದ ಸಮಯ, ಅಂಬೆಗಾಲಿಡಲು ಉತ್ತೇಜನ ಮತ್ತು ಸಂವೇದನಾ ಚಟುವಟಿಕೆಗಳಂತಹ ಚಟುವಟಿಕೆಗಳೊಂದಿಗೆ ನಿಮ್ಮ ಶಿಶುವಿನ ಸ್ಥೂಲ ಮತ್ತು ಸೂಕ್ಷ್ಮ ಚಲನಾ ಕೌಶಲ್ಯಗಳನ್ನು ಪರಿಷ್ಕರಿಸಲು ನೀವು ಸಹಾಯ ಮಾಡಬಹುದು. ಶಿಶುಗಳು ಸಹ ಆಹಾರ ಸೇವನೆಯ ಸಮಯದಲ್ಲಿ ಸ್ಥೂಲ ಚಲನಾ ಕೌಶಲ್ಯಗಳ ನಿಟ್ಟಿನಲ್ಲಿ ಕಾರ್ಯಶೀಲರಾಗಿರುತ್ತಾರೆ. ಬಾಟಲಿಗೆ ಕೈಚಾಚುವುದು, ಅಥವಾ ತಾವೇ ಪರಿಕರಗಳನ್ನು ಅಥವಾ ಬೆರಳುಗಳನ್ನು ಬಳಸಿ ತಿನ್ನುವುದು ಚಿಕ್ಕ ಮಕ್ಕಳಿಗೆ ತಮ್ಮ ಸ್ಥೂಲ ಚಲನಾ ಕೌಶಲ್ಯಗಳನ್ನು ಅಭ್ಯಾಸ ಮಾಡಲು ಅತ್ಯುತ್ತಮ ಚಟುವಟಿಕೆಯಾಗಿದೆ.

ಮಕ್ಕಳು ಸ್ಥೂಲ ಚಲನಾ ಕೌಶಲ್ಯಗಳನ್ನು ಬೆಳೆಸಿಕೊಳ್ಳುತ್ತಿದ್ದಂತೆ, ತಮ್ಮ ಸೂಕ್ಷ್ಮ ಚಲನಾ ಕೌಶಲ್ಯಗಳನ್ನು ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಲು ಪ್ರಾರಂಭಿಸುತ್ತಾರೆ. ಅಂಬೆಗಾಲಿಡುವವರಿಗೆ ಸೂಕ್ಷ್ಮ ಚಲನಾ ಕೌಶಲ್ಯಗಳನ್ನು ಅಭ್ಯಾಸ ಮಾಡಲು ಕಲೆ ಮತ್ತು ಕರಕುಶಲತೆ, ಕ್ರೀಡೆಗಳನ್ನು ಆಡುವುದು ಮತ್ತು ಪ್ರತಿಕ್ರಿಯಾತ್ಮಕ ಆಟಿಕೆಗಳೊಂದಿಗೆ ಆಡುವಂತಹ ಹಲವಾರು ಆಟದಸಮಯದ ಚಟುವಟಿಕೆಗಳಿವೆ.

**ಸಾಮಾಜಿಕ ಮತ್ತು ಭಾವನಾತ್ಮಕ ವಿಕಾಸಗಳ್ಯಾವುವು ಮತ್ತು ವಿಳಂಬದ ಪರಿಣಾಮಗಳೇನು**

ಮಕ್ಕಳು ನಿರಂತರವಾಗಿ ವಿಭಿನ್ನ ಸಂವಹನ ಕೌಶಲ್ಯಗಳನ್ನು ಕಲಿಯುತ್ತಿರುತ್ತಾರೆ ಮತ್ತು ಬೆಳೆಸಿಕೊಳ್ಳುತ್ತಾರೆ. ಅವರ ಸಾಮಾಜಿಕ ಬೆಳವಣಿಗೆ ಮತ್ತು ಕೌಶಲ್ಯಗಳು ಹೊಸ ಜನರೊಡನೆ ಪಾರಸ್ಪರಿಕ ಕ್ರಿಯೆಯನ್ನು ಒಳಗೊಂಡ ವ್ಯವಸ್ಥೆಗಳಲ್ಲಿ ಹೆಚ್ಚಾಗಿ ಕಲಿಯಲ್ಪಡುತ್ತವೆ. ಉದಾಹರಣೆಗೆ ಆಟದದಿನ ಅಥವಾ ಶಾಲೆಯ ಪ್ರಾರಂಭ ಅಥವಾ ಶಿಶು ಸದನ. ವಿಶೇಷವಾಗಿ ಈ ಸಾಮಾಜಿಕ ಸಂದರ್ಭಗಳಲ್ಲಿ ಮಗುವು ಹೇಗೆ ಸಂವಹನ ನಡೆಸುತ್ತದೆ ಎಂಬುದರಲ್ಲಿ ಭಾವನಾತ್ಮಕ ಕೌಶಲ್ಯಗಳು ಮುಖ್ಯ ಅಂಶಗಳಾಗುತ್ತವೆ.

ಸಹಭಾಜನ(sharing)ವನ್ನು ನಿರಾಕರಿಸುವ ಮತ್ತೊಂದು ಮಗುವಿನೊಂದಿಗೆ ಆಟವಾಡುವಂತಹ ಪ್ರತಿಕೂಲ ಪಾರಸ್ಪರಿಕ ಕ್ರಿಯೆಗಳೊಂದಿಗೆ ವ್ಯವಹರಿಸುವಾಗ, ಮಗು ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲ್ಯಗಳನ್ನು ಕಲಿಯುತ್ತದೆ. ಚಿಕ್ಕ ವಯಸ್ಸಿನಲ್ಲಿ ಕಲಿತ ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲ್ಯಗಳು, ಪರಿಸ್ಥಿತಿಗೆ ಪರಿಣಾಮಕಾರಿಯಾಗಿ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ಮಕ್ಕಳಿಗೆ ಕಲಿಸುತ್ತವೆ.

**ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯ ವಿಳಂಬಗಳು ಈ ರೀತಿಯ ವರ್ತನೆಗಳಲ್ಲಿ ಕಾಣಿಸಿಕೊಳ್ಳಬಹುದು:**

- ಸಾಮಾಜಿಕ ಮುಜುಗರ
- ಸಂಭಾಷಣೆಯನ್ನು ಪ್ರಾರಂಭಿಸಲು ಅಸಮರ್ಥತೆ ಅಥವಾ ತೊಂದರೆ
- ನಿಭಾಯಿಸುವುದರಲ್ಲಿನ ತೊಂದರೆ
- ದೀರ್ಘಕಾಲೀನ ಕೋಪ, ರೇಗಾಟಗಳು ಅಥವಾ ಆವೇಗಗಳು.

ಈ ವರ್ತನೆಗಳು ಮಗುವು ಸಾಮಾಜಿಕ ಅಥವಾ ಭಾವನಾತ್ಮಕ ಬೆಳವಣಿಗೆಯ ವಿಳಂಬವನ್ನು ಅನುಭವಿಸುತ್ತಿದೆಯೆಂದು ಪೋಷಕರಿಗೆ ಸೂಚಿಸಬಹುದು. ಈ ಸಂದರ್ಭದಲ್ಲಿ, ಈ ವರ್ತನೆಗಳನ್ನು ನಿರ್ವಹಿಸಲು ಮಕ್ಕಳಿಗೆ ಹೆಚ್ಚಿನ ಬೆಂಬಲ ಮತ್ತು ಮಾರ್ಗದರ್ಶನದ ಅಗತ್ಯವಿರುತ್ತದೆ. ಹೊಸ ಸಾಮಾಜಿಕ ಮತ್ತು ಭಾವನಾತ್ಮಕ ಸವಾಲುಗಳನ್ನು ಎದುರಿಸುವಲ್ಲಿ ಮಕ್ಕಳು ತಮ್ಮ ಪ್ರತಿಕ್ರಿಯೆಯನ್ನು ಹೇಗೆ ಬದಲಾಯಿಸಿಕೊಳ್ಳಬೇಕೆಂದು ಚಿಕಿತ್ಸಕರು ಮಕ್ಕಳಿಗೆ ಕಲಿಸುತ್ತಾರೆ.

ಸರಿಯಾದ ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲ್ಯಗಳಿಲ್ಲದೆ, ಇತರರೊಂದಿಗೆ ಪಾರಸ್ಪರಿಕ ಕ್ರಿಯೆ ಮತ್ತು ಸಂವಹನ ನಡೆಸುವುದು ಅತ್ಯಂತ ಕಷ್ಟಕರವಾಗಬಲ್ಲದು. ಎಬಿಎ (ABA) ಚಿಕಿತ್ಸೆಯು ಸ್ವಲೀನತೆ ಹೊಂದಿರುವ ಮಕ್ಕಳಿಗೆ ಅವರ ಸಂವಹನ ಕೌಶಲ್ಯಗಳನ್ನು ಸಂಚಾಲಿಸಲು ಮತ್ತು ಅವರ ಸಾಮಾಜಿಕ ಕೌಶಲ್ಯಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಸಹಾಯ ಮಾಡಬಲ್ಲದು.

**ಸಂಜ್ಞಾನಾತ್ಮಕ ವಿಕಾಸಕ್ಕೆ ಅಪಾಯದ ಮುನ್ಸೂಚಕಗಳು ಯಾವುವು**

ಸಂಜ್ಞಾನಾತ್ಮಕ ವಿಕಾಸದ ವಿಳಂಬಗಳು ಬಾಲ್ಯದ ಬೆಳವಣಿಗೆಯ ಅತ್ಯಂತ ಮಹತ್ವಪೂರ್ಣ ಭಾಗವಾಗಿವೆ. ಸಂಜ್ಞಾನಾತ್ಮಕ ವಿಳಂಬಗಳು ಬಾಲ್ಯದ ಮಾತು, ಭಾಷಾ ಕೌಶಲ್ಯಗಳು, ಮತ್ತು ಸಾಮಾಜಿಕ ಹಾಗೂ ಭಾವನಾತ್ಮಕ ವಿಕಾಸವು ಸೇರಿದಂತೆ ಮಗುವಿನ ಬೆಳವಣಿಗೆಯ ಇತರ ಎಲ್ಲಾ ಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತವೆ. ಸಂಜ್ಞಾನಾತ್ಮಕ ವಿಳಂಬವನ್ನು ಶೈಶವಾವಸ್ಥೆಯಲ್ಲಿ ಕಾಣಬಹುದು.

**ಸಂಜ್ಞಾನಾತ್ಮಕ ವಿಕಾಸದ ವಿಳಂಬದ ಆರಂಭಿಕ ಲಕ್ಷಣಗಳನ್ನು ಕಂಡುಹಿಡಿಯಲು ಈ ಲಕ್ಷಣಗಳನ್ನು ಹುಡುಕಿರಿ.**

- ಆಟದ ಸಮಯದಲ್ಲಿ ಆಸಕ್ತಿಯ ಕೊರತೆ
- ಸುತ್ತುಮುತ್ತಲಿನ ಬಗ್ಗೆ ನಿರಾಸಕ್ತಿ
- ನಿಧಾನವಾಗಿ ಪ್ರತಿಕ್ರಿಯಿಸುವುದು
- ಕುತೂಹಲದ ಕೊರತೆ


ಸಂಜ್ಞಾನಾತ್ಮಕ ವಿಕಾಸವು ಸ್ವಲೀನತೆಯಂತಹ ಅಸ್ವಸ್ಥತೆಯ ಲಕ್ಷಣವಾಗಿರಬಹುದು. ಈ ಸಂದರ್ಭದಲ್ಲಿ, ಚಿಕಿತ್ಸಕರು ಎಬಿಎ ಚಿಕಿತ್ಸೆಯನ್ನು ಶಿಫಾರಸ್ಸು ಮಾಡಬಹುದು. ಬಾಲ್ಯದ ಮಾತು ಮತ್ತು ಭಾಷಾ ವಿಳಂಬದಿಂದ ಉಂಟಾಗುವ ಯಾವುದೇ ಅಸ್ವಸ್ಥತೆಗಳನ್ನು ಊಹಿಸುವ ಮೊದಲು ವಿಶ್ವಾಸಾರ್ಹ ಮತ್ತು ಪರವಾನಗಿ ಪಡೆದ ವೃತ್ತಿನಿರತ ವಾಕ್-ಚಿಕಿತ್ಸಕರ ಸಲಹೆಯನ್ನು ಪಡೆಯಿರಿ.

**4**

**ಅಪಾಯದ ಮುನ್ಸೂಚಕಗಳು**

**ಬಾಲ್ಯದ ಬೆಳವಣಿಗೆಯ ಸರ್ವೇಸಾಮಾನ್ಯ ವಿಳಂಬಗಳನ್ನು ಕುರಿತಂತೆ**

| | |
|---|---|
| <br>ಮಾತು ಮತ್ತು ಭಾಷಾ ವಿಳಂಬಗಳು<br>• ಬಾಲ್ಯದ ವಾಕ್-ಶಬ್ದ ಚಲನ ಅಸ್ವಸ್ಥತೆ (Childhood apraxia of speech) – ಮಾತಿನ ಚಲನೆಗಳನ್ನು ಅನುಕ್ರಮವಾಗಿ ನಡೆಸಲು ಸಾಧ್ಯವಾಗದ ಅಸಮರ್ಥತೆ ಅಥವಾ ತೊಂದರೆಗೆ ಸಂಬಂಧಿಸಿದ ಬಾಲ್ಯಾವಸ್ಥೆಯ ಮಾತಿನ ಅಸ್ವಸ್ಥತೆ.<br>• ಅಭಿವ್ಯಕ್ತಿಯ ಭಾಷಾ ವಿಳಂಬಗಳು (Expressive language delays) - ಸಂವಹನಕ್ಕಾಗಿ ಪದಗಳನ್ನು ಬಳಸುವಲ್ಲಿನ ತೊಂದರೆ.<br>• ತಡವಾಗಿ ಮಾತನಾಡುವವರು (Late talkers) - ಸಮವಯಸ್ಕರಿಗೆ ಹೋಲಿಸಿದಾಗ ಆಡುಮಾತಿನ ಸೀಮಿತ ಪದಸಂಪತ್ತುಳ್ಳವರು.<br>• ಕಲಿಕೆಯಲ್ಲಿನ ಅಸಮರ್ಥತೆಗಳು (Learning disabilities)-- ಓದುವುದು, ಬರೆಯುವುದು ಮತ್ತು ಕಾಗುಣಿತದಲ್ಲಿನ ತೊಂದರೆ.<br>• ದೋಷಯುತ ಉಚ್ಚಾರ (Dysarthria) ಧ್ವನಿ | <br>ವಿಳಂಬಿತ ಚಲನಾ ಕೌಶಲ್ಯಗಳು<br>ಚಾಲನೆಯ ಆಯೋಜನೆ (ಬೆಳವಣಿಗೆಯಲ್ಲಿನ ಸಮನ್ವಯದ ಅಸ್ವಸ್ಥತೆ – Dyspraxia) ಕಾರ್ಯವೊಂದರ ಹಂತಗಳನ್ನು ನಿರ್ವಹಿಸಲು ಅಗತ್ಯವಿರುವ ಹೊಸ ಚಾಲನಾ ಕೌಶಲ್ಯವನ್ನು ನಿರ್ವಹಿಸಲು ದೇಹವನ್ನು ಆಯೋಜಿಸುವ ಹಾಗೂ ಸಂಚಾಲಿಸುವ ನಿಟ್ಟಿನ ತೊಂದರೆಗೆ ದೇಹವನ್ನು ಸಂಘಟಿಸಿ ನಿರ್ದೇಶಿಸುವುದು ಕಷ್ಟಕರ.<br>• ದೇಹದ ಅರಿವು – ದೇಹವು ಯಾವ ಜಾಗದಲ್ಲಿದೆ ಮತ್ತು ಆ ಭಾಗಗಳು ಸಮನ್ವಿತ ಚಲನೆಗಳಿಗಾಗಿ ಒಟ್ಟಾಗಿ ಇಲ್ಲವೇ ಪ್ರತ್ಯೇಕವಾಗಿ ಹೇಗೆ ಕಾರ್ಯ ನಿರ್ವಹಿಸುತ್ತವೆಂಬುದರ ಗ್ರಹಿಕೆಯಲ್ಲಿನ ತೊಂದರೆ<br>• ಕಣ್ಣು ಮತ್ತು ಕೈಗಳ ನಡುವೆ ಸಮನ್ವಯದ ಕೊರತೆ |

| | |
|---|---|
| ಸ್ನಾಯುಗಳು ದುರ್ಬಲಗೊಂಡದ್ದರಿಂದ ಉಂಟಾಗುವ ವಾಕ್-ಚಾಲನಾ ಅಸ್ವಸ್ಥತೆ. | • ಇದು, ಹಿಡಿದುಕೊಳ್ಳಲು ಮತ್ತು ಎಸೆಯಲು ತೊಂದರೆ ಉಂಟುಮಾಡಬಲ್ಲದು<br>• ಸಂವೇದನೆ ಆಧಾರಿತ ಚಾಲನಾ ತೊಂದರೆಗಳು ಹೊಸ ಚಲನೆಗಳನ್ನು ಕಲಿಯುವಾಗ ಹೇಗೆ ನಿಭಾಯಿಸಲಾಗುತ್ತದೆ ಎಂಬುದರ ಗ್ರಹಿಕೆಯಲ್ಲಿ, ದೃಷ್ಟಿಗೋಚರ ವ್ಯವಸ್ಥೆಯ ಮೇಲಿನ ಅತ್ಯಧಿಕ ಅವಲಂಬನೆ |
| <br>ಸಾಮಾಜಿಕ ಮತ್ತು ಭಾವನಾತ್ಮಕ ವಿಳಂಬಗಳು<br>• ಸಾಮಾಜಿಕ ಮುಜುಗರ<br>• ಸಂಭಾಷಣೆಯನ್ನು ಪ್ರಾರಂಭಿಸಲು ಅಸಮರ್ಥತೆ ಅಥವಾ ತೊಂದರೆ<br>• ನಿಭಾಯಿಸುವುದರಲ್ಲಿನ ತೊಂದರೆ<br>• ದೀರ್ಘಕಾಲೀನ ಕೋಪ, ರೇಗಾಟಗಳು ಅಥವಾ ಆವೇಗಗಳು | <br>ಸಂಜ್ಞಾನಾತ್ಮಕ ವಿಳಂಬ<br>ಆಟದ ಸಮಯದಲ್ಲಿ ಆಸಕ್ತಿಯ ಕೊರತೆ<br>• ಸುತ್ತುಮುತ್ತಲಿನ ಬಗ್ಗೆ ನಿರಾಸಕ್ತಿ<br>• ನಿಧಾನವಾಗಿ ಪ್ರತಿಕ್ರಿಯಿಸುವುದು<br>• ಕುತೂಹಲದ ಕೊರತೆ<br>ಸಂಜ್ಞಾನಾತ್ಮಕ ವಿಳಂಬವು ಬಾಲ್ಯದ ಮಾತು, ಭಾಷಾ ಕೌಶಲ್ಯಗಳು ಹಾಗೂ ಸಾಮಾಜಿಕ ಮತ್ತು ಭಾವನಾತ್ಮಕ ವಿಕಾಸವು ಸೇರಿದಂತೆ ಮಗುವಿನ ವಿಕಾಸದ ಇತರ ಎಲ್ಲ ಕ್ಷೇತ್ರಗಳನ್ನು ಪ್ರಭಾವಿಸುತ್ತದೆ |

Source: www.BLOSSOMBEHAVIORAL.ORG

Source: https://blossomchildrenscenter.com/2021/01/14/red-flags-for-common-childhood-developmental-delays/